VIJAYAKUMAR KANNUR
Digitally signed by VIJAYAKUMAR KANNUR
Date: 2025.12.02 11:03:31 +0530



**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 01.12.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್ ಎಸ್ ಹೆಚ್ ವಕೀಲರಿಂದ :**

ನಾನು ಆಯುರ್ವೇದಿಕ ವೈದ್ಯ ವೃತ್ತಿಯನ್ನು ಮುಧೋಳದಲ್ಲಿ ಮಾಡುತ್ತಿರುವೆನು. ದೂರುದಾರ ನನಗೆ ಸುಮಾರು 20 ವರ್ಷದಿಂದ ಪರಿಚಯ ಇರುವನು. ನನಗೆ ಬಹಳ ಆತ್ಮೀಯನು ಎಂದರೆ ಸರಿ. ಈ ಪ್ರಕರಣದ ಬಗ್ಗೆ ದೂರುದಾರ ನನಗೆ ಮಾಹಿತಿ ನೀಡಿದ್ದು, ಆ ಪ್ರಕಾರ ನಾನು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.  ತನಗೆ ವೈಯಕ್ತಿವಾಗಿ ಸಹ ಮಾಹಿತಿ ಇರುವುದು ಎಂದು ಸಾಕ್ಷಿ ಉತ್ತರಿಸುವರು. ದೂರುದಾರ ಮತ್ತು ಆರೋಪಿಯ ಮಧ್ಯೆ ಆಗಿರುವ ಹಣಕಾಸಿನ ವ್ಯವಹಾರದ ಮಧ್ಯೆ ನಾನು ಸಾಕ್ಷಿದಾರ ಅಂತ ಭಾಗವಹಿಸಿದ್ದೇನು. ಆರೋಪಿ  ಮತ್ತು ದೂರುದಾರನ ಮಧ್ಯೆ ಆತ ವ್ಯವಾಹರಗಳಿಗೆ ಸಂಬಂಧಪಟ್ಟಂತೆ ಮಾತ್ರ ನಾನು ಭಾಗವಹಿಸಿರುವೆನು.

2. ನನ್ನ ವೃತ್ತಿಗೆ ಸಂಬಂಧಪಟ್ಟಂತೆ 3-4 ದಿನಗಳ ಹಿಂದೆ ಯಾರು ನನ್ನ ಹತ್ತಿರ ಬಂದು ಚಿಕಿತ್ಸೆ ಪಡೆದುಕೊಂಡು ಹೋಗಿರುವರೋ ಆ ರೋಗಿಗಳ ಬಗ್ಗೆ ನನಗೆ ಹೇಳಲು ಬರುತ್ತದೆ. 8 ದಿನಗಳ ಹಿಂದೆ ನನ್ನ ಆಸ್ಪತ್ರೆಗೆ ಬಂದಿರುವಂತಹ ರೋಗಿ ಕ್ರಮ ಸಂಖ್ಯೆ 8 ಹೆಸರು ನನಗೆ ಹೇಳಲು ಆಗುವುದಿಲ್ಲ, ಅದರೆ ರೋಗಿಯ ಹೆಸರು ಹೇಳಿದರೆ ಮಾತ್ರ ನಾನು ಚಿಕಿತ್ಸೆ ನೀಡಿದ ಬಗ್ಗೆ ಹೇಳುತ್ತೇನೆ. ಆರೋಪಿ ಮತ್ತು ದೂರದಾರನ ಮಧ್ಯೆ 2023 ರಲ್ಲಿ ಆದ ವ್ಯವಹಾರದ ಬಗ್ಗೆ ದಿನಾಂಕ ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ.  ದಿನಾಂಕದ ಬಗ್ಗೆ ಸ್ವಲ್ಪ ಹೆಚ್ಚು ಕಡಿಮೆ ಆಗಿರಬಹುದು. ಈ ದಿನಾಕಂದ ಬಗ್ಗೆ ದೂರುದಾರ ನನಗೆ ಹೇಳಿ ಕೊಟ್ಟಿರುವುದರಿಂದ ಆ ಪ್ರಕಾರ ನಾನು ಹೇಳುತ್ತಿದ್ದೇನೆ ಎಂದರೆ ಸರಿ. ನನಗೆ ಆರೋಪಿಯ ಬಗ್ಗೆ ವೈಯಕ್ತಿಕವಾಗಿ ಮಾಹಿತಿ ಇರುವುದಿಲ್ಲ ಎಂದರೆ ಸರಿ.ಆರೋಪಿಯ ವ್ಯವಹಾರದ ಬಗ್ಗೆ

ನನಗೆ ವೈಯಕ್ತಿಕವಾಗಿ ಮಾಹಿತಿ ಇರುವುದಿಲ್ಲ, ಆದರೆ ಆತನಿಗೆ ಅಡಚಣೆ ಇರುವ ಸಲುವಾಗಿ ಹಣ ಪಡೆದುಕೊಂಡ ಬಗ್ಗೆ ನನಗೆ ಮಾಹಿತಿ ಇರುವುದು.

3. ದೂರುದಾರ ಮತ್ತು ಆತನ ಹೆಂಡತಿ ಆರೋಪಿಯ ಖಾತೆಗೆ ಹಣ ವರ್ಗಾವಣೆ ಮಾಡುವಾಗ ನಾನು ಹೋಗಿರುವುದಿಲ್ಲ, ಆದರೆ ಅವರು ನನಗೆ ಹೇಳಿರುವರು. ಈ ಹಣ ಆರೋಪಿಯ ಖಾತೆಗೆ ವರ್ಗಾವಣೆ ಮಾಡಿದ ಬಗ್ಗೆ ನಾನು ಖಚಿತಪಡಿಸಿಕೊಂಡಿರುವುದಿಲ್ಲ, ಆದರೆ ಅವರು ಹೇಳಿದ ಮೇರೆಗೆ ನಾನು ಹೇಳುತ್ತಿರುವೆನು. ಆರೋಪಿಯ ಖಾತೆಗೆ ನನ್ನ ಖಾತೆಯಿಂದ ಹಣ ವರ್ಗಾವಣೆ ಮಾಡಿರುವುದಿಲ್ಲ. ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿನ ಸಂಗತಿಗಳನ್ನು ಓದಿ ತಿಳಿದುಕೊಂಡೆ ನಾನು ಸಹಿ ಮಾಡಿರುವೆನು. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ನನ್ನ ಖಾತೆಯಿಂದ ಆರೋಪಿಯ ಖಾತೆಗೆ ರೂ. 3 ಲಕ್ಷ 20 ಸಾವಿರ ಹಣ ವರ್ಗಾವಣೆ ಮಾಡಿರುವುದಾಗಿ ಎಂದು ಸುಳ್ಳು ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎಂದರೆ ತನ್ನ ಖಾತೆಯಿಂದ ಯಾವುದೇ ಹಣ ವರ್ಗಾವಣೆ ಮಾಡಿರುವುದಿಲ್ಲ ಎಂದು ಸಾಕ್ಷಿ ಉತ್ತರಿಸುವರು. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಖಂಡಿಕೆ 5 ರಲ್ಲಿ ನನ್ನ ಗಂಡ ಪಿರ್ಯಾದಿದಾರನಿಗೆ 2024 ನೇ ಸಾಲಿನಲ್ಲಿ ಅಂತ ಬರೆಸಿರುವೆನು ಎಂದರೆ ಅದು ತಪ್ಪಾಗಿರುವುದಾಗಿ ಎಂದು ಸಾಕ್ಷಿ ಉತ್ತರಿಸುವರು. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಓದಿಯೇ ನಾನು ಸಹಿ ಮಾಡಿರುವೆನು ಎಂದರೆ ಸರಿ.

4. ದೂರುದಾರ ಆರೋಪಿಯ ಖಾತೆಗೆ ಹಣ ವರ್ಗವಣೆಯನ್ನು ದಿಃ 08.05.2023 ರಂದು ರೂ. 6 ಲಕ್ಷ, ದಿಃ 16.06.2023 ರೂ. 6 ಲಕ್ಷ ಮತ್ತು ದಿಃ 14.05.2023 ರಂದು ರೂ. 4 ಲಕ್ಷ 95 ಸಾವಿರ ಹಣ ವರ್ಗವಣೆ ಮಾಡಿರುವರು. ಉಳಿದ ಹಣದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ದೂರುದಾರ ಆರೋಪಿಗೆ ರೂ. 16 ಲಕ್ಷ ಹಾಗೂ 15 ಲಕ್ಷ ವರ್ಗಾವಣೆ ಮಾಡಿರುವುದಾಗಿ ಎಂದು ಹೇಳಿರುವರು. ಈ ಹಣ ನೀಡುವ ಸಮಯದಲ್ಲಿ ದೂರುದಾರ ನನಗೆ ಕರೆಸಿದ್ದು, ಈ ಹಣವನ್ನು ಬ್ಯಾಂಕ್ ಖಾತೆಯ ಮೂಲಕ ವರ್ಗವಣೆ ಮಾಡಿರುವೆವು. ದೂರುದಾರ ಮತ್ತು ಆತನ ಹೆಂಡತಿಯ ಬ್ಯಾಂಕ್ ಖಾತೆಯ ಮೂಲಕ ಹಣ ವರ್ಗಾವಣೆ

ಮಾಡಿರುವರು. ಕರ್ನಾಟಕ ಬ್ಯಾಂಕ್ ನಿಂದ ವರ್ಗಾವಣೆ ಮಾಡಿರುವರು ಆದರೆ ಯಾರ ಖಾತೆಗೆ ಎಂದು ನನಗೆ ನಿರ್ದಿಷ್ಟವಾಗಿ ಹೇಳಲು ಆಗುವುದಿಲ್ಲ.

5. ಈ ಆರೋಪಿಗೆ ಹಣ ನೀಡುವ ಸಮಯದಲ್ಲಿ ಹಿರಿಯರೆಂದರೆ ನಾನು ಮಾತ್ರ ಹಾಜರು ಇದ್ದೇನು, ಆರೋಪಿ ಮತ್ತು ದೂರುದಾರನ ಪರವಾಗಿ ಬೇರೆ ಯಾರು ಹಿರಿಯರು ಹಾಜರು ಇರಲಿಲ್ಲ. ಈ ರೀತಿಯಾಗಿ ಸಾಕ್ಷಿ ನುಡಿಯುವಂತೆ ದೂರುದಾರ ನನಗೆ ಹೇಳಿರುವುದರಿಂದ ನಾನು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದೂರುದಾರ ಹಾಜರು ಪಡಿಸಿರುವ ದಾಖಲಾತಿಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಆರೋಪಿ ಹಣ ನೀಡುವುದಾಗಿ ಎಂದು ಹೇಳಿದ್ದು ಆತನಿಗೆ ಹಣ ನೀಡಲು ಆಗಿರುವುದಿಲ್ಲ, ಆಗ ನಮ್ಮನ್ನು ಮಾತುಕತೆಗಾಗಿ ಕರೆಸಿದ್ದರು ಆಗ ದಿಃ 23.09.2024 ಆರೋಪಿ ಚೆಕ್ ನ್ನು ದೂರುದಾರನ ಮನೆಯಲ್ಲಿ ನೀಡಿರುವನು. ಈ ಆರೋಪಿ ನೀಡಿರುವ ಚೆಕ್ ಅಮಾನ್ಯಗೊಂಡ ಬಗ್ಗೆ ನನಗೆ ದೂರುದಾರ ಹೇಳಿರುವುದರಿಂದ ನನಗೆ ಗೊತ್ತಾಗಿರುವುದು. ಈ ಪ್ರಕರಣದಲ್ಲಿ ಸಾಕ್ಷಿ ನುಡಿಯುವಂತೆ ನನಗೆ ನ್ಯಾಯಾಲಯದಿಂದ ಸಮನ್ಸ ಬಂದಿರುವುದಿಲ್ಲ ಎಂದರೆ ಸರಿ. ದೂರುದಾರ ನನಗೆ ತನ್ನ ಪರವಾಗಿ ಸಾಕ್ಷಿ ನುಡಿಯುವಂತೆ ಹೇಳಿರುವುದರಿಂದ ಆ ಪ್ರಕಾರ ನಾನು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರದೇ ಇದ್ದರೂ ಸಹಿತ ದೂರುದಾರನಿಗೆ ಸಹಾಯ ಮಾಡುವ ಸಲುವಾಗಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ.

VIJAYAKUMAR KANNUR
Digitally signed by VIJAYAKUMAR KANNUR
Date: 2025.12.02 11:03:38 +0530

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ